ಆಗಸ್ಟ್ - ಅಕ್ಟೋಬರ್ ೨೦೨೫

ಸಂಪುಟ ೧, ಸಂಚಿಕೆ ೩

# ವ್ಯಾಸ ತರಂಗ ದ್ವೈಮಾಸಿಕ

**ಆರೂರು ಲಕ್ಷ್ಮೀನಾರಾಯಣ ರಾವ್ ಸ್ಮಾರಕ ಆಯುರ್ವೇದ ಮಹಾವಿದ್ಯಾಲಯ, ಕೊಪ್ಪ**


**ವಿದ್ಯಾರ್ಥಿ ಸಂಘದ ದ್ವೈಮಾಸಿಕ ಪತ್ರಿಕೆ**

ಈ ಸಂಚಿಕೆಯನ್ನು ಕನ್ನಡದ ಹೆಮ್ಮೆಯ ಸಾಧಕರಿಗೆ ಅರ್ಪಿಸಲಾಗಿದೆ.

## ರಾಜ್ಯೋತ್ಸವದ ವಿಶೇಷ ಸಂಚಿಕೆ







ನುಡಿ ನಮನ

## ವ್ಯಾಸ ತರಂಗದ ಒಳ ನೋಟ





ಆರೂರು ರಮೇಶ್ ರಾವ್
ಗೌರವಾಧ್ಯಕ್ಷರು

ದ್ವೈಮಾಸಿಕ ಪತ್ರಿಕೆ ಹಾಗೂ ವಿದ್ಯಾರ್ಥಿ ಸಂಘದ ಪರ ನೀವು ತೋರುತ್ತಿರುವ ಸತತ ಬೆಂಬಲ ಹಾಗೂ ಪ್ರೋತ್ಸಾಹಕ್ಕೆ

**ಧನ್ಯವಾದಗಳು.**



ಆರೂರು ನವಿತಾ ರಾವ್
ಟ್ರಸ್ಟಿ

# ಪ್ರಾಂಶುಪಾಲರ ಮುನ್ನುಡಿ



ಡಾ. ಹರ್ಷ ಎನ್.ಎಂ
ಪ್ರಾಂಶುಪಾಲರು ALNRMAMC, ಕೋಟ

ನಮ್ಮ ಯುವ ಆಯುರ್ವೇದ ವಿದ್ಯಾರ್ಥಿಗಳ ಸೃಜನಶೀಲತೆ, ಬೌದ್ಧಿಕತೆ ಮತ್ತು ಅಭಿವೃದ್ಧಿಶೀಲ ಆಸೆ-ಆಕಾಂಕ್ಷೆಗಳ ಜೀವಂತ ಪ್ರತಿಬಿಂಬವಾಗಿರುವ, ವಿದ್ಯಾರ್ಥಿ ಸಂಘದ "ವ್ಯಾಸ ತರಂಗ" ಪತ್ರಿಕೆಯ ಈ ಸಂಚಿಕೆಯನ್ನು ನಿಮ್ಮ ಮುಂದೆ ಪ್ರಸ್ತುತ ಪಡಿಸಲು ಅತ್ಯಂತ ಹರ್ಷಿಸುತ್ತೇನೆ. ವಿದ್ಯಾರ್ಥಿ ದ್ವೈಮಾಸಿಕ ಪತ್ರಿಕೆ ಎಂಬುದು ಕೇವಲ ಬರಹಗಳು ಮತ್ತು ಕಲಾತ್ಮಕ ಅಭಿವ್ಯಕ್ತಿಗಳ ಸಂಗ್ರಹ ಮಾತ್ರವಲ್ಲದೆ, ಉತ್ಸಾಹ, ಕುತೂಹಲ ಮತ್ತು ನಿಷ್ಠೆಯಿಂದ ಕೂಡಿದ ಸಮೃದ್ಧ ಶೈಕ್ಷಣಿಕ ವಾತಾವರಣದ ಜೀವಂತ ಸಾಕ್ಷಿಯಾಗಿದೆ. ಕಲ್ಪನೆಗಳನ್ನು ಅವಲೋಕಿಸಲು, ಜ್ಞಾನವನ್ನು ಸಂಭ್ರಮಿಸಲು ಮತ್ತು ತಮ್ಮ ಸೃಜನಶೀಲತೆಯನ್ನು ವ್ಯಕ್ತಪಡಿಸಲು ನಮ್ಮ ವಿದ್ಯಾರ್ಥಿಗಳು ಈ ವೇದಿಕೆಯನ್ನು ಸಕ್ರಿಯವಾಗಿ ಅಳವಡಿಸಿಕೊಂಡಿರುವುದನ್ನು ಕಂಡು ನನಗೆ ಅಪಾರ ಸಂತೋಷವಾಗಿದೆ.

ಆಯುರ್ವೇದ ತನ್ನ ಆಳವಾದ ಜ್ಞಾನ ಮತ್ತು ಸಮಗ್ರ ಜೀವನದ ದೃಷ್ಟಿಕೋನದ ಮೂಲಕ, ಕಲಿಕೆಯ ಸಾಮಾನ್ಯ ಗಡಿಗಳನ್ನು ಮೀರಿ ದೃಷ್ಟಿ ಹರಿಸುವಂತೆ ನಮ್ಮನ್ನು ಪ್ರೇರೇಪಿಸುತ್ತದೆ. ಅದು ಅವಲೋಕನ, ಮನನ ಮತ್ತು ನಿರಂತರ ಸ್ವವಿಕಾಸವನ್ನು ಉತ್ತೇಜಿಸುತ್ತದೆ. ಈ ಪ್ರಕಟಣೆಯನ್ನು ರೂಪಿಸುವ ಮತ್ತು ಸಂಗ್ರಹಿಸುವ ಕ್ರಮದಲ್ಲಿ ವಿದ್ಯಾರ್ಥಿ ಸಂಘ ಈ ಅಂಶಗಳನ್ನು ಅಳವಡಿಸಿಕೊಂಡಿರುವುದು ನನಗೆ ಸಂತೋಷ ನೀಡಿದೆ. ಪತ್ರಿಕೆಯಲ್ಲಿರುವ ಲೇಖನಗಳು, ಕರ್ನಾಟಕದ ರಾಜವಂಶಗಳ ಕುರಿತ ಪ್ರಬಂಧಗಳು ಮತ್ತು ಜಗದ್ವಿಖ್ಯಾತ ಕನ್ನಡ ಕಾದಂಬರಿಗಾರ ಶ್ರೀ ಎಸ್.ಎಲ್. ಭೈರಪ್ಪನವರಿಗೆ ಸಲ್ಲಿಸಿದ ಗೌರವಲೇಖನ, ಹಾಗು ಕಲಾಕೃತಿಗಳು ಕೇವಲ ಶೈಕ್ಷಣಿಕ ಭಾಗವಹಿಸುವಿಕೆ ಮಾತ್ರವಲ್ಲದೆ ನಮ್ಮ ಸಂಸ್ಥೆ ಪೋಷಿಸುವ ಆಲೋಚನೆ ಹಾಗು ಸೃಜನಶೀಲತೆಯ ಆಳವನ್ನು ಸಹ ಪ್ರತಿಬಿಂಬಿಸುತ್ತವೆ.

ನಾನು ಸಂಪಾದಕೀಯ ತಂಡ, ಲೇಖಕರು, ಹಾಗು ವಿದ್ಯಾರ್ಥಿ ಸಂಘದ ಎಲ್ಲಾ ಸದಸ್ಯರನ್ನು ಅವರ ನಿಷ್ಠೆ ಮತ್ತು ಸಹಕಾರಕ್ಕಾಗಿ ಅಭಿನಂದಿಸುತ್ತೇನೆ. ಕಲಿಕೆ ಸಮೃದ್ಧಿಯಾಗಲು ಆಲೋಚನೆಗಳನ್ನು ಮುಕ್ತವಾಗಿ ಹಂಚಿಕೊಳ್ಳುವ, ಪ್ರತೀ ವಿದ್ಯಾರ್ಥಿ ಭಾಗವಹಿಸಲು, ಪ್ರಶ್ನೆ ಕೇಳಲು ಮತ್ತು ತನ್ನ ಭಾವನೆ ವ್ಯಕ್ತಪಡಿಸಲು ಉತ್ತೇಜಿತನಾಗುವ ಪರಿಸರ ಅತ್ಯಂತ ಅಗತ್ಯ ಎಂಬುದು ಇವರ ಈ ಪ್ರಯತ್ನದಿಂದ ನಮಗೆ ಮನವರಿಕೆಯಾಗುತ್ತದೆ.

ಈ 'ವ್ಯಾಸ ತರಂಗ' ದ್ವೈಮಾಸ ಪತ್ರಿಕೆ-ಸಂವಾದ, ಆವಿಷ್ಕಾರ ಮತ್ತು ನಮ್ಮ ಶ್ರೀಮಂತ ಆಯುರ್ವೇದ ಮತ್ತು ಸ್ಥಳೀಯ ಪರಂಪರೆಯನ್ನು ಮೆಚ್ಚುಗೆ ಪಡಲು ಸ್ಫೂರ್ತಿದಾಯಕವಾಗಲಿ. ವಿದ್ಯಾರ್ಥಿ ಸಂಘಕ್ಕೆ ಇನ್ನೂ ಅನೇಕ ವರ್ಷಗಳ ಉತ್ಸಾಹಭರಿತ ಪ್ರಕಾಶನವನ್ನು ಹಾರೈಸುತ್ತೇನೆ ಮತ್ತು ಅವರು ತಲುಪಲಿರುವ ಹೊಸ ಎತ್ತರಗಳಿಗೆ ಸಾಕ್ಷಿಯಾಗಲು ಬಯಸುತ್ತೇನೆ

- ಡಾ. ಹರ್ಷ ಎನ್. ಎಂ

# ಸ್ಥಾಪಕ ಸಂಯೋಜಕರ ಹಿತ ನುಡಿ

ಒಂದು ದಿನ ಕೆಲಸ ಮುಗಿದ ನಂತರ ಆಫೀಸಿಗೆ ಸಹಿ ಮಾಡಲು ಹೋದಾಗ, ಆಫೀಸ್ ಅಕೌಂಟೆಂಟರಾದ ಶ್ರೀ ಮಹೇಶ್ ಸರ್ ಅವರ ಮೇಜಿನ ಮೇಲೆ, ಈ ಕಾಲೇಜಿನಲ್ಲಿ ಬಹಳ ಹಿಂದೆ ಪ್ರಕಟವಾಗುತ್ತಿದ್ದ ಪತ್ರಿಕೆಯೊಂದನ್ನು ಕಂಡೆ. ಕೆಂಪು ಬಣ್ಣದ, ರೇಷಿಮೆಯಂತೆ ಮೃದುವಾದ ಮುಖಪುಟದಲ್ಲಿ 'ಸುವಾಚ' ಎಂಬ ಶೀರ್ಷಿಕೆಯನ್ನು ಹೊಂದಿದ, ಹಳೆಯದಾದರೂ ಸುಂದರವಾದ ಪತ್ರಿಕೆಯೊಳಗೆ, ಅಂದಿನ ವಿದ್ಯಾರ್ಥಿಗಳು ಬರೆದ ಕಥೆ-ಕವನಗಳನ್ನು ಕಂಡು ಬಹಳ ಆನಂದವಾಯಿತು. ನಂತರ ಅದರ ಪ್ರಕಟಣೆ ಮುಂದುವರೆದಿಲ್ಲ ಎಂಬ ಬೇಸರವೂ ಆಯಿತು. ಇದಾದ ಬಹಳ ದಿನಗಳ ನಂತರ ಅಂದಿನ ಪ್ರಾಂಶುಪಾಲರಾದ ಶ್ರೀ ಸಂಜಯ ಕೆ. ಎಸ್. ರವರು ನನ್ನನ್ನು ಕರೆದು ಎನ್.ಸಿ.ಐ.ಎಸ್.ಎಂ ನ ಸಲಹೆಯ ಮೇರೆಗೆ ವಿದ್ಯಾರ್ಥಿ ಸಂಘವನ್ನು ಕಟ್ಟುವ ಜವಾಬ್ದಾರಿಯನ್ನು ವಹಿಸಿದರು. ಜವಾಬ್ದಾರಿ ಕೊಡುವುದು ಮಾತ್ರವಲ್ಲ, ವಿದ್ಯಾರ್ಥಿ ಸಂಘವನ್ನು ಕಟ್ಟುವಲ್ಲಿ ಮಾರ್ಗದರ್ಶಕರಾಗಿ ನಿಂತು ನನ್ನ ಕೆಲಸವನ್ನು ಅರ್ಧ ಸುಲಭಗೊಳಿಸಿದರು. ಉಳಿದರ್ಧವನ್ನು ಪೂರ್ಣಗೊಳಿಸಲು ಬೆನ್ನೆಲುಬಾಗಿ ನಿಂತದ್ದು ಅಂದಿನ ಉಪ ಪ್ರಾಂಶುಪಾಲರಾದ ಶ್ರೀ ಹೆಚ್. ಆರ್. ಪ್ರದೀಪ್ ರವರು. ಇವರಿಬ್ಬರ ಬೆಂಬಲವಿದ್ದರೆ ಸಾಕು ದಾರಿ ದೀಪ್ತವಾಗಿ, ಜಯ ಸಿಗುವುದರಲ್ಲಿ ಎರಡನೆಯ ಮಾತಿಲ್ಲ. ಇದೆಲ್ಲಕ್ಕೂ ಹೆಚ್ಚಾಗಿ, ಸಂಘವನ್ನು ಕಟ್ಟಿ, ಉದ್ಘಾಟಿಸಿ, ದ್ವೈಮಾಸಿಕ ಪತ್ರಿಕೆಯನ್ನು ಹೊರತರುವಲ್ಲಿ ನಮ್ಮ ಸಂಘದ ಕೈ ಹಿಡಿದು ನಿಂತದ್ದು ಎ. ಎಲ್. ಎನ್. ರಾವ್ ಸಂಸ್ಥೆಯ ವಿಶ್ವಸ್ಥರಾದ ಶ್ರೀಮತಿ ನಮಿತಾ ರಾವ್ ರವರು. ವಿದ್ಯಾರ್ಥಿಗಳ ಪ್ರತಿಭೆಗೆ ವೇದಿಕೆಯಾದ ಸಂಘವನ್ನು ಕಟ್ಟುವ ಮಹತ್ತರ ಕೆಲಸವನ್ನು, ಕಿರಿಯ ಸಹಾಯಕ ಪ್ರಾಧ್ಯಾಪಕಿಯಾದ ನನ್ನಿಂದ ಮಾಡಿಸಿದ ಈ ಎಲ್ಲರಿಗೂ ನನ್ನ ಹೃತ್ಪೂರ್ವಕ ನಮನಗಳು.

ವಿದ್ಯಾರ್ಥಿಗಳು ಪಠ್ಯೇತರವಾಗಿ ಸಾಹಿತ್ಯ, ಸಂಗೀತ, ವಿವಿಧ ಕಲೆಗಳ ಅಭ್ಯಾಸವನ್ನು ಹೆಚ್ಚು ಇಷ್ಟ ಪಡುತ್ತಾರೆ. Genz ಯುವಕರು ತಮ್ಮ ಮೊಬೈಲ್ ಫೋನಿನಿಂದ ಆಚೆಗಿರುವ ಪ್ರಪಂಚವನ್ನು ನೋಡುವಂತೆ ಪ್ರೇರೆಪಿಸಿ, ಅವರು ಸಕಾರಾತ್ಮಕ ಹವ್ಯಾಸಗಳನ್ನು ರೂಢಿಸಿಕೊಳ್ಳುವಂತೆ ದಾರಿ ಕಲ್ಪಿಸುವುದು ವಿದ್ಯಾ ಸಂಸ್ಥೆಗಳ ಜವಾಬ್ದಾರಿಯಾಗಿದೆ. ಅದರಲ್ಲೂ ಆಯುರ್ವೇದದಂತಹ ವೈದ್ಯಕೀಯ ಅಧ್ಯಯನ ಮಾಡಬೇಕಾದ ವಿದ್ಯಾರ್ಥಿಗಳಿಗೆ ಸಾಹಿತ್ಯ ಜ್ಞಾನ ಬಹಳ ಮುಖ್ಯ. ಸಂಸ್ಕೃತ ಭಾಷೆಗೆ ಅತ್ಯಂತ ಹತ್ತಿರವಾದ ಕನ್ನಡ ಭಾಷೆಯ ಸಾಹಿತ್ಯ, ಸಂಗೀತ, ಕಲೆ-ಇತಿಹಾಸ, ಇವುಗಳ ಪರಿಚಯ, ಹಾಗು ಅಧ್ಯಯನ ಕರ್ನಾಟಕದ ವೈದ್ಯಕೀಯ ವಿದ್ಯಾರ್ಥಿಗಳಿಗೆ ಮೇಲುಗೈ ನೀಡಬಲ್ಲುದು. ಆಯುರ್ವೇದದ ಸದ್ವೃತ್ತ ಪ್ರಕರಣದಲ್ಲಿ ತಿಳಿಸಿರುವಂತೆ ಬರಿಯ ಜ್ಞಾನಕ್ಕಿಂತಲೂ ಮುಖ್ಯವಾದದು ಸಂಸ್ಕಾರ. ಕಲೆ-ಸಾಹಿತ್ಯಗಳಲ್ಲಿ ತೊಡಗಿಸಿಕೊಳ್ಳುವುದರ ಮೂಲಕ ವಿದ್ಯಾರ್ಥಿಗಳು ಸುಸಂಸ್ಕೃತರಾಗಿ ಹೊರಹೊಮ್ಮಿದ್ದರೆ, ಅದಕ್ಕಿಂತಲು ಹೆಚ್ಚಿನ ಸಂತೋಷ ವಿದ್ಯಾಸಂಸ್ಥೆಗೆ ಮತ್ತೊಂದಿರಲಾರದು.

ಪುರಂದರದಾಸರು, ದ.ರಾ.ಬೇಂದ್ರೆ, ಡಿ.ವಿ. ಗುಂಡಪ್ಪ, ಕೆ.ಎಸ್. ನರಸಿಂಹಸ್ವಾಮಿ, ಬನ್ನಂಜೆ ಗೋವಿಂದಾಚಾರ್ಯರಂತಹ ಮಹಾನುಭಾವರ ಈ ನಾಡಿನಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಅಗೆದಷ್ಟು ಹೊಮ್ಮುವ ಸದ್ಗುಣಭರಿತ ಸಾಹಿತ್ಯ ಭಂಡಾರವನ್ನು ಪಡೆದಿದ್ದಾರೆ. ಹಾಗಾಗಿ ಇವರಲ್ಲಿ ಒಳ್ಳೆಯ ಸಂಸ್ಕಾರ ಎಂದಿಗೂ ಹೆಚ್ಚುತ್ತಲೇ ಹೋಗಬೇಕು. ಜೀವನದಲ್ಲಿ ಕಷ್ಟಗಳು ಎದುರಾದಾಗಲೆಲ್ಲ ಧೈರ್ಯದಿಂದ, ತಾಳ್ಮೆಯಿಂದ, ಸತ್ಯದ ಪರವಾಗಿ ನಿಲ್ಲುವ ಶಕ್ತಿಮೂಡಬೇಕು. ವೈದ್ಯರಾದ ಮೇಲೆ ಹಣದ ಆಸೆಗೆ ಧೃತಿಗೆಡದೆ ಕಾರುಣ್ಯ, ಮತ್ತು ಪ್ರೀತಿಯಿಂದ ರೋಗಿಗಳನ್ನು ಗುಣಪಡಿಸುವ ಗುಣವಂತರಾಗಬೇಕು. ಇನ್ನೊಬ್ಬರಿಗೆ ತೊಂದರೆಕೊಡದಂತೆ ಬದುಕುವ, ಪ್ರಕೃತಿಯನ್ನು ಸ್ವಚ್ಛವಾಗಿಸಲು ಸದಾಕಾಲ ಪ್ರಯತ್ನಿಸುವ ಸರಳ ಜೀವನಶೈಲಿ ಅವರಲ್ಲಿ ಮೈಗೂಡಬೇಕು. ಅವರಲ್ಲಿರುವ ಪ್ರತಿಭೆಯನ್ನು ಸರಿಯಾದ ಮಾರ್ಗದರ್ಶನದಡಿ ಹೊರತರಬೇಕು. ನಮ್ಮ ಸಾಹಿತ್ಯ ಮತ್ತು ಕಲೆ ಪಾಶ್ಚಾತ್ಯರ ಕೃತ್ರಿಮ ದಾಳಿಗೆ ತುತ್ತಾಗಿ, ಸ್ವಂತಿಕೆಯನ್ನು ಕಳಕೊಂಡು ಬಡವಾಗಬಾರದೆಂಬ ಹಲವು ಉದ್ದೇಶಗಳ ಮೇರೆಗೆ, ಕಲೆ ಮತ್ತು ಸಾಹಿತ್ಯ ಸಂಘ, ಹಾಗು ಪತ್ರಿಕೋದ್ಯಮ ಸಂಘ ಎಂಬ ಎರಡು ಕವಲುಗಳಲ್ಲಿ ವಿದ್ಯಾರ್ಥಿ ಸಂಘವನ್ನು ಹುಟ್ಟುಹಾಕಲಾಯಿತು.

ಕಲೆ-ಸಾಹಿತ್ಯ, ಸಕಲ ವಾಙ್ಮಯಕ್ಕೂ ಅಧಿಪತಿಯಾದ ಮಹರ್ಷಿ ವೇದವ್ಯಾಸರ ಹೆಸರನ್ನೆ ಆರಿಸಿಕೊಂಡು ನಮ್ಮ ಸಂಘದ ನಾಮಕರಣವೂ ಆಯಿತು. ಸಾಹಿತ್ಯ ಸಂಘದ ಧ್ಯೇಯ ವಾಕ್ಯವಾಗಿ 'ಏತತ್ ಸರ್ವಂ ಜನಾರ್ದನಾತ್' ಹಾಗು ಪತ್ರಿಕೋದ್ಯಮ ಸಂಘಕ್ಕೆ 'ಸತ್ಯಂ ಪರಂ ಧೀಮಹಿ' ಎಂಬ ವ್ಯಾಸ ವಾಣಿಗಳನ್ನೆ ಆಯ್ದುಕೊಂಡೆವು. ಸಂಘದ ಲೋಗೋವನ್ನು ಪರಿಷ್ಕರಿಸಿ, ಪತ್ರಿಕೆಯ ರೂಪುರೇಷೆಗಳ ವಿನ್ಯಾಸದಲ್ಲಿ ಸಹಕರಿಸಿ, ಅತಿಥಿಗಳ ಸಂದರ್ಶನಗೈದು, ಮೊದಲೆರಡು ದ್ವೈಮಾಸಿಕ ಪತ್ರಿಕೆಗಾಗಿ ಶ್ರಮಿಸಿದ, ಸಂಘದ ಎಲ್ಲ ವಿದ್ಯಾರ್ಥಿಗಳಿಗೂ ನನ್ನ ಕೃತಜ್ಞತೆಗಳು. ಕಾರಣಾಂತರದಿಂದ ನಾನು ಸಂಸ್ಥೆಯಿಂದ ಬಿಡುಗಡೆಗೊಂಡಿದ್ದರೂ, ವಿದ್ಯಾರ್ಥಿ ಸಂಘವು ತನ್ನ ಕಾರ್ಯವನ್ನು ಶ್ರದ್ಧೆಯಿಂದ ನಿರ್ವಹಿಸುತ್ತಾ ಯಶಸ್ವಿಯಾಗಲಿ ಎಂದು ಶುಭ ಹಾರೈಸುತ್ತೇನೆ. ಹೊಸ ಪ್ರಾಧ್ಯಾಪಕರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಸುಸಂಸ್ಕಾರದ ಹಾದಿಯಲ್ಲಿ ಸಾಗಲಿ, ಉನ್ನತಿಯನ್ನು ಪಡೆಯಲಿ ಎಂದು ವೇದವ್ಯಾಸರಲ್ಲಿ ಪ್ರಾರ್ಥಿಸುತ್ತೇನೆ.



ಡಾ. ಪೂಜಾ ಹುಯಿಲಗೋಳ
(ಎಂ ಡಿ ಪಂಚಕರ್ಮ)

# “ಸತ್ಯ, ತತ್ತ್ವ ಮತ್ತು ಜೀವಜಗತ್ತಿನ ಹುಡುಕಾಟ – ಭೈರಪ್ಪರಿಗೆ ಶ್ರದ್ಧಾಂಜಲಿ 


## ಸಂತೇಶಿವರ ಲಿಂಗಣ್ಣ ಭೈರಪ್ಪ

ಇವರು ಆಧುನಿಕ ಕನ್ನಡ ಸಾಹಿತ್ಯದ ಕಾದಂಬರಿಕಾರರು ಮತ್ತು ಲೇಖಕರು. ಇವರ ಕಾದಂಬರಿಗಳು ಹಲವಾರು ಮರುಮುದ್ರಣಗಳನ್ನು ಕಂಡು ಇವರ ಜನಪ್ರಿಯತೆಯನ್ನು ಸಾರುತ್ತಿವೆ.ಇವರು ಹಾಸನ ಜಿಲ್ಲೆ ಚನ್ನರಾಯಪಟ್ಟಣ ಸಂತೇಶಿವರದಲ್ಲಿ ೧೬- ೭- ೧೯೩೧ರಂದು ಹುಟ್ಟಿದರು. ಪ್ರಾಥಮಿಕ ಶಿಕ್ಷಣವನ್ನು ಹುಟ್ಟೂರಿನಲ್ಲಿ ಪಡೆದರು. ಕಿತ್ತು ತಿನ್ನುವ ಬಡತನ, ಪ್ಲೇಗ್ ಮಾರಿಯಿಂದ ತತ್ತರಗೊಂಡ ಪರಿಸರದಲ್ಲೂ, ಅವರು ಸಣ್ಣ ವಯಸ್ಸಿನಿಂದಲೇ ಅವರ ತಾಯಿಯ ಧೀಮಂತಿಕೆಯನ್ನು ಮೈಗೂಡಿಸಿಕೊಂಡಿದ್ದರು.

ಅವರು ಗಾಂಧೀಜಿಯವರ ಮೌಲ್ಯಗಳಿಗೆ ಬೆಲೆ ಕೊಟ್ಟು ಸ್ವಾತಂತ್ರ್ಯ ಚಳುವಳಿಗೆ ತೊಡಗಿಸಿಕೊಂಡಾಗ ಅವರಿಗೆ ಕೇವಲ ಹದಿಮೂರು ವರ್ಷ ಎಂದು ಅವರ ಆತ್ಮಕಥೆ ಭಿತ್ತಿಯಲ್ಲಿ ಉಲ್ಲೇಖಿಸಿದ್ದಾರೆ.

ಅವರು ಪ್ರೌಢ ಶಿಕ್ಷಣ ಹಾಗೂ ಕಾಲೇಜು ಶಿಕ್ಷಣವನ್ನು ಮೈಸೂರಿನಲ್ಲಿ ಮುಂದುವರೆಸಿ ಎಂ.ಎಯಲ್ಲಿ ಸುವರ್ಣಪದಕದೊಂದಿಗೆ ತೇರ್ಗಡೆಯಾದರು . ಅವರು ಬರೋಡದ ಮಹಾರಾಜ ಸಯ್ಯಾಜಿ ರಾವ್ ವಿಶ್ವ ವಿದ್ಯಾಲಯದಿಂದ ಸತ್ಯ ಮತ್ತು ಸೌಂದರ್ಯ" ಎಂಬ ಇಂಗ್ಲಿಷಲ್ಲಿ ರಚಿಸಿದ ಮಹಾಪ್ರಬಂಧಕ್ಕಾಗಿ ಡಾಕ್ಟರೇಟ್ ಪದವಿ ಗಳಿಸಿದ್ದರು. ಗುಜರಾತಿನ ಸರ್ದಾರ್ ಪಟೇಲ್ ವಿಶ್ವವಿದ್ಯಾಲಯದಲ್ಲಿ  ತಮ್ಮ ಉಪನ್ಯಾಸಕ ವೃತ್ತಿ ಕೈಗೊಂಡ ಭೈರಪ್ಪನವರು, ಶಿಸ್ತಿನ ವಿದ್ಯಾಭ್ಯಾಸದ ನಡುವೆ ಮಹತ್ವದ ಕಾದಂಬರಿಗಳನ್ನು ರಚಿಸಿದ್ದಾರೆ.
ಇದುವರೆಗೆ ಸುಮಾರು ೨೧ ಕಾದಂಬರಿಗಳನ್ನು ಬರೆದಿದ್ದಾರೆ.

ಅವರ ಕೊಡುಗೆಗಳು:
ಎಸ್ ಎಲ್ ಭೈರಪ್ಪರವರು ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆಗಳು ಅಪಾರ, ಅವರ ಕೃತಿಗಳಲ್ಲಿ -ತಾತ್ವಿಕ ಆಳ, ಸಾಮಾಜಿಕ ಮತ್ತು ಪೌರಾಣಿಕ ಆಳ, ಮಾನವನ ನಡುವಳಿಕೆಯ ಸಾರ ಮತ್ತು ಸಾಕ್ಷರತೆಗಳು ಕಾಣಸಿಗುತ್ತವೆ.
ಅವರ ಕೆಲವೊಂದು ಕೃತಿಗಳಲ್ಲಿ ನಮ್ಮ ದೇಶದ ಇತಿಹಾಸ ಹಾಗೂ ಮಹಾಗ್ರಂಥಗಳಾದ ಮಹಾಭಾರತ, ರಾಮಾಯಣವನ್ನು ಬಹು ಆಯಾಮಗಳಲ್ಲಿ ಹೇಳಿದ್ದಾರೆ. ಪರ್ವ ಎಂಬ ಕಾದಂಬರಿಯಲ್ಲಿ, ಮಹಾಭಾರತದಲ್ಲಿ ನಡೆದ ಸಾಮಾಜಿಕ ಕಾರ್ಯಗಳು, ಹೆಣ್ಣಿನ ಪ್ರಾಮುಖ್ಯತೆ ಎಲ್ಲವನ್ನೂ ಸುಂದರವಾಗಿ ಬಣ್ಣಿಸಿದ್ದಾರೆ.



ಅವರ ಹಲವಾರು ಕಾದಂಬರಿಗಳಲ್ಲಿ
೧. ನಾಯಿ ನೆರಳು
೨.ಆವರಣ
೩.ಗೃಹಭಂಗ
೪.ವಂಶವೃಕ್ಷ
೫.ತಬ್ಬಲಿಯು ನೀನಾದೆ ಮಗನೆ ೬.ಮತದಾನ- ಇವುಗಳು ಜನಪ್ರಿಯವಾಗಿವೆ.

ಪ್ರಶಸ್ತಿ ಗೌರವಗಳು:
೧, ೨೦೨೩ - ಪದ್ಮಭೂಷಣ ಪ್ರಶಸ್ತಿ
೨. ೨೦೧೪- ಡಾ. ಬೆಟಗೇರಿ ಕೃಷ್ಣ ಶರ್ಮಾ ಪ್ರಶಸ್ತಿ
೩. ೨೦೧೧- ನಾಡೋಜ ಪ್ರಶಸ್ತಿ
೪. ೨೦೧೦ - ಸರಸ್ವತಿ ಸಮ್ಮಾನ ಪ್ರಶಸ್ತಿ
೫.೨೦೦೫- ಪಂಪ ಪ್ರಶಸ್ತಿ
೬- ೨೦೦೭- ಗೌರವ ಡಾಕ್ಟರೇಟ್ (ಕಲಬುರ್ಗಿ ವಿಶ್ವವಿದ್ಯಾಲಯ
೭. ೧೯೭೫- ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (ದಾಟು ಕಾದಂಬರಿ)
೮. ೧೯೬೬- ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ(ವಂಶ ವೃಕ್ಷ ಕಾದಂಬರಿ)
೯.ವಾಗ್ವಿಲಾಸಿನಿ ಪುರಸ್ಕಾರ
೧೦. ರಾಷ್ಟ್ರೀಯ ಪ್ರಾಧ್ಯಾಪಕ, ಸಾಹಿತ್ಯ ಅಕಾಡೆಮಿ ಫೆಲೋ ಗೌರವ .

ಇವರ ಸಾಹಿತ್ಯದ ಕೊಡುಗೆಗಳು ಅಪಾರ ಹಾಗೂ ಸುಲಲಿತ.
ಇವರ ಅದ್ಭುತ ಕಾದಂಬರಿಗಳನ್ನು ಓದಿ ನಾವು ಮುಂದಿನ ನಾಗರಿಕ ಸಮಾಜಕ್ಕೆ "ಕನ್ನಡಿ" ಆಗೋಣ

"ಭೀಮಕಾಯ ಹೇಳಿದನು ಬೆಳಕು ಮೂಡಿತು ಆದರೆ ಧರ್ಮಶ್ರೀ ದೂರಸರಿದರು ಮತದಾನ ಬೇಡವೆಂದು
ಏಕೆಂದರೆ ವಂಶವೃಕ್ಷ ಹರಿದು ಹೋಯಿತು ಜಲಪಾತವಾಗಿ ನಾಯಿಯ ನೆರಳಿನಿಂದ ತಬ್ಬಲಿಯು ನೀನಾದೆ ಮಗನೆ
ಈ ಗೃಹಭಂಗ ಗ್ರಹಣವನ್ನು ದಾಟು ಅನ್ವೇಷಣೆಯ ಪರ್ವ ಎರುಅಲ್ಲಿ ನೆಲೆ ಸಿಗುವುದು
ಸ್ವಾರ್ಥವೆಂಬ ಆವರಣ ಇರುವಾಗ ಕವಲು ಯಾನ ಮಾಡು ಉತ್ತರಕಾಂಡಕ್ಕೆ! "

ಸಂಗ್ರಹಣೆ- ಅಂಬಿಕಾ ಬಿ.


# ವಂಶ - ವೈಭವ - ಕರ್ನಾಟಕ
# ಕರ್ನಾಟಕದ ರಾಜವಂಶಗಳು

## ಕದಂಬ



ಮಯೂರ ಶರ್ಮಾ ಕದಂಬರ ಮೊದಲ ರಾಜನಾಗಿದ್ದು, ಕನ್ನಡದ ಮೊದಲ ಶಾಸನ ಎಂದು ಹೆಸರಾಗಿರುವ ಹಲ್ಮಿಡಿ ಶಾಸನ ಇವರ ಹೆಮ್ಮೆಯ ಸಾಕ್ಷಿಯಾಗಿತ್ತು. ಕನ್ನಡವನ್ನು ರಾಜ್ಯಭಾಷೆಯಾಗಿ ಬಳಸಿದ ಮೊದಲ ರಾಜವಂಶ ಇವರದ್ದು. ಇವರು ಕನ್ನಡ, ನಾಗರಿ ಮತ್ತು ಗ್ರಂಥ ಲಾಂಛನವನ್ನು ಬಳಸಿರುತ್ತಾರೆ.

## ಗಂಗರು



ಕರ್ನಾಟಕದ ಮೊದಲ ಸ್ಥಳೀಯ ಆಡಳಿತಕಾರರು,ಜೈನ ಧರ್ಮದ ಪೋಷಕರು ಆಗಿದ್ದು, ಇವರು ವಿಶ್ವದ ಅತಿ ಎತ್ತರದ ಏಕಶಿಲಾ ಗೊಮ್ಮಟೇಶ್ವರ ಮೂರ್ತಿಯ ನಿರ್ಮಾಣ ಮಾಡಿದರು. ಇವರ ಆಡಳಿತ ಕಾಲದಲ್ಲಿ ನೀರಾವರಿ ವ್ಯವಸ್ಥೆ ಭೂಮಾಪನ ಮತ್ತು ತೆರಿಗೆ ವ್ಯವಸ್ಥೆಯನ್ನು ಅಭಿವೃದ್ಧಿ ಮಾಡಿದರು. ಕನ್ನಡ ಇವರ ಆಡಳಿತ ಭಾಷೆಯಾಗಿತ್ತು.ಇವರ ಕಾಲದಲ್ಲಿ ಕಾವ್ಯ ಮತ್ತು ಶಾಸನಗಳು ಅರಳಿದವು.

## ಬಾದಾಮಿ ಚಾಲುಕ್ಯರು




ಪ್ರಮುಖ ರಾಜರು - ಪುಲಕೇಶಿ ಪ್ರಥಮ, ಪುಲಕೇಶಿ ದ್ವಿತೀಯ, ವಿಜಯಾದಿತ್ಯ. ಇವರು ಕರ್ನಾಟಕ ರಾಜಕೀಯ ಏಕೀಕರಣದ ಪಿತಾಮಹರು.ಇವರ ಕಾಲದಲ್ಲಿ ಐಹೊಳೆ, ಪಟ್ಟದಕಲ್ಲು, ಬಾದಾಮಿ ಇತ್ಯಾದಿ ಶಿಲಾಮಂದಿರಗಳನ್ನು ನಿರ್ಮಿಸಿದ್ದಾರೆ. ಪಟ್ಟದಕಲ್ಲಿನ ದೇವಾಲಯವು ಯುನೆಸ್ಕೋ ವಿಶ್ವ ಪರಂಪರೆಯ ತಾಣವಾಗಿದೆ. ಇವರ ವಾಸ್ತು ಶೈಲಿಯು ದ್ರಾವಿಡ ಹಾಗೂ ಆರ್ಯ ಶೈಲಿಯ ಮಿಶ್ರಣದಿಂದ ರೂಪುಗೊಂಡಿತ್ತು.

# ವಂಶ - ವೈಭವ - ಕರ್ನಾಟಕ
# ಕರ್ನಾಟಕದ ರಾಜವಂಶಗಳು

## ರಾಷ್ಟ್ರಕೂಟರು



ರಾಜ ಅಮೋಘವರ್ಷ ನೃಪತುಂಗ ಕವಿ ಮತ್ತು ತತ್ವಜ್ಞಾನಿಯಾಗಿದ್ದನು. ಇವರ ಕವಿರಾಜಮಾರ್ಗ ಕನ್ನಡ ಸಾಹಿತ್ಯದ ಮೊದಲ ಕೊಡುಗೆಯಾಗಿದ್ದು ಈ ಕಾಲದಲ್ಲಿ ವಾಣಿಜ್ಯ ಮತ್ತು ವಿದೇಶಿ ಸಂಪರ್ಕಗಳು ಬೆಳವಣಿಗೆ ಕಂಡವು.ಶಿಲ್ಪಕಲೆಯಲ್ಲಿ ಅಜಂತಾ ಎಲ್ಲೋರದ ಕೈಲಾಸನಾಥ ದೇವಸ್ಥಾನವು ಒಂದು ಉದಾಹರಣೆಯಾಗಿದೆ. ಇವರ ರಾಜಧಾನಿ ಮಾನ್ಯಕೇತವಾಗಿತ್ತು.



## ಹೊಯ್ಸಳರು

ರಾಜ ವಿಶ್ವನಾಥ ಮತ್ತು ಬಲ್ಲಾಳರಾಯರು-ಕಲೆ, ಸಂಗೀತ, ನೃತ್ಯ ಮತ್ತು ದೇವಾಲಯದ ಮಹಾ ಪೋಷಕರು. ಇವರು ಶೌರ್ಯ ಹಾಗೂ ಶಿಲ್ಪಕಲೆಯ ಪರಮೋನ್ನತ ಉದಾಹರಣೆ. ಈ ಯುಗದಲ್ಲಿ ಕನ್ನಡ ಸಾಹಿತ್ಯವು ಹೊಸ ಉನ್ನತಿಯನ್ನು ತಲುಪಲು ಜನ್ನ, ರಾಘವಾಂಕ, ಹರಿಹರ,ಪಂಪ, ಮುಂತಾದ ಮಹಾಕವಿಗಳು ಕಾರಣೀಭೂತರು.

## ವಿಜಯನಗರ ಸಾಮ್ರಾಜ್ಯ




ಹರಿಹರ,ಹಕ್ಕ - ಬುಕ್ಕರಾಯ ಹಾಗೂ ಕೃಷದೇವರಾಯರಿಂದ ಕರ್ನಾಟಕದಲ್ಲಿ ಸುವರ್ಣಯುಗ ಪ್ರಾರಂಭವಾಯಿತು. ಇವರ ಕಾಲದಲ್ಲಿ ಕನ್ನಡ, ತೆಲುಗು ಹಾಗೂ ಸಂಸ್ಕೃತ ಕಾವ್ಯಗಳು ಅರಳಿದವು. ಹಂಪಿಯ ಬಜಾರು,ವೀರಭದ್ರ ದೇವಸ್ಥಾನ, ವಿಠಲ ದೇವಾಲಯ ಇಂದಿಗೂ ಆ ಕಾಲದ ವೈಭವವನ್ನು ಸಾರುತ್ತಿವೆ.

ಸಂಗ್ರಹಣೆ- • ಸೃಷ್ಟಿ ಎಂ.ಎಸ್
• ದೀಪಶ್ರೀ

# ನಾಡು ಹೇಳುವ ಕಥೆ- ಕರ್ನಾಟಕದ ಕಲೆ"


## ಬೇಡರ ವೇಷ



ಬೇಡರ ವೇಷ ಅಥವಾ ಬೇಡರ ಕುಣಿತ ಎಂಬುದು ಉತ್ತರ ಕನ್ನಡ ಜಿಲ್ಲೆಯ ಶಿರಸಿ ಭಾಗದಲ್ಲಿ ಹೋಳಿ ಹಬ್ಬದ ಸಮಯದಲ್ಲಿ ಪ್ರದರ್ಶಿಸಲಾಗುವ ಒಂದು ಅತ್ಯಂತ ವಿಶಿಷ್ಟ ಮತ್ತು ಶಕ್ತಿಯುತವಾದ ಜಾನಪದ ನೃತ್ಯ-ನಾಟಕ ಕಲೆಯಾಗಿದೆ. ಇದು ಕೇವಲ ನೃತ್ಯವಲ್ಲ, ಬದಲಿಗೆ 300 ವರ್ಷಗಳಷ್ಟು ಇತಿಹಾಸವಿರುವ ಒಂದು ಸಾಂಸ್ಕೃತಿಕ ಸಂಪ್ರದಾಯವಾಗಿದೆ.

ಸ್ಥಳೀಯ ದಂತಕಥೆಯ ಪ್ರಕಾರ, ಮಾರಿಕಾಂಬೆಯನ್ನು ಶಿರಸಿಗೆ ಕರೆತಂದ ಮತ್ತು ಜನರಿಗಾಗಿ ತನ್ನ ಪ್ರಾಣವನ್ನೇ ತ್ಯಾಗ ಮಾಡಿದ ಒಬ್ಬ ಬೇಡನ (ಬೇಟೆಗಾರನ) ಕಥೆಯನ್ನು ಈ ವೇಷವು ನೆನಪಿಸುತ್ತದೆ.

## ಭೂತಾರಾಧನೆ



ಭೂತಾರಾಧನೆಯು ಕರಾವಳಿ ಕರ್ನಾಟಕದ, ವಿಶೇಷವಾಗಿ ತುಳುನಾಡು ಪ್ರದೇಶದ (ದಕ್ಷಿಣ ಕನ್ನಡ, ಉಡುಪಿ ಮತ್ತು ಕಾಸರಗೋಡು ಜಿಲ್ಲೆಗಳು) ಒಂದು ವಿಶಿಷ್ಟವಾದ ಮತ್ತು ಪ್ರಾಚೀನವಾದ ಜಾನಪದ ಧಾರ್ಮಿಕ ಆಚರಣೆಯಾಗಿದೆ. ಇದನ್ನು ದೈವಾರಾಧನೆ ಅಥವಾ ಭೂತಕೋಲ ಎಂದೂ ಕರೆಯುತ್ತಾರೆ.

ಭೂತಾರಾಧನೆಯು ಸಾಮಾನ್ಯವಾಗಿ ರಾತ್ರಿಯಿಡೀ ನಡೆಯುವ ಒಂದು ವಿಸ್ತಾರವಾದ ವಿಧಿಯಾಗಿದೆ. ಇದರಲ್ಲಿ ದೈವದ ಪಾತ್ರಧಾರಿ (ಪೂಜಾರಿ ಅಥವಾ ನರ್ತಕ) ವಿಶೇಷ ವೇಷಭೂಷಣ, ಮುಖವರ್ಣಿಕೆ ಮತ್ತು ಆಭರಣಗಳನ್ನು ಧರಿಸಿ ನರ್ತಿಸುತ್ತಾನೆ.

ಈ ಆಚರಣೆಯಲ್ಲಿ 'ಭೂತ' ಅಥವಾ 'ದೈವ' ಎಂದು ಕರೆಯಲ್ಪಡುವ ಆತ್ಮಗಳು ಅಥವಾ ದೇವತೆಗಳನ್ನು ಆರಾಧಿಸಲಾಗುತ್ತದೆ. ಈ ದೈವಗಳು ಗ್ರಾಮದ ಮತ್ತು ಜನರ ರಕ್ಷಕ ಶಕ್ತಿಗಳಾಗಿವೆ ಮತ್ತು ಅವುಗಳು ಸಮುದಾಯದ ಯೋಗಕ್ಷೇಮ ಮತ್ತು ಸಮತೋಲನವನ್ನು ಕಾಪಾಡುತ್ತವೆ ಎಂದು ನಂಬಲಾಗಿದೆ.

# "ನಾಡು ಹೇಳುವ ಕಥೆ- ಕರ್ನಾಟಕದ ಕಲೆ"

## ಅಂಟಿಗೆ ಪಿಂಟಿಗೆ



ಅಂಟಿಗೆ ಪಿಂಟಿಗೆ ಎನ್ನುವುದು ಕರ್ನಾಟಕದ ಮಲೆನಾಡು (ಶಿವಮೊಗ್ಗ, ಚಿಕ್ಕಮಗಳೂರು, ಉತ್ತರ ಕನ್ನಡ) ಭಾಗದಲ್ಲಿ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಆಚರಿಸಲಾಗುವ ಒಂದು ಸಂಪ್ರದಾಯದ ಜಾನಪದ ಕಲೆ; ಯುವಕರ ತಂಡಗಳು ದೀಪಾವಳಿಯ ಬಲಿಪಾಡ್ಯಮಿಯಂದು ದೇವಸ್ಥಾನದಿಂದ ದೊಡ್ಡದಾದ ದೀವಟಿಗೆಯನ್ನು ಹಚ್ಚಿಕೊಂಡು, ಊರ ಮನೆಗಳಿಗೆ ಹೋಗಿ, ಹಾಡುತ್ತಾ, ದೀಪ ಹಚ್ಚಿ, ಹಣ, ಧಾನ್ಯ ಸಂಗ್ರಹಿಸಿ, ಗ್ರಾಮದ ಒಳಿತಿಗಾಗಿ ಬಳಸುವ ವಿಶಿಷ್ಟ ಆಚರಣೆ.

## ಹುಲಿ ಕುಣಿತ



ಪಿಲಿ ನಲಿಕೆ ಅಥವಾ ಹುಲಿವೇಷ (ಕನ್ನಡದಲ್ಲಿ) ಎಂಬುದು ಕರಾವಳಿ ಕರ್ನಾಟಕದ (ತುಳುನಾಡು) ಅತ್ಯಂತ ಜನಪ್ರಿಯ ಮತ್ತು ಹುರುಪಿನ ಜಾನಪದ ಕಲೆಯಾಗಿದೆ. ಇದು ಮಂಗಳೂರು ಮತ್ತು ಉಡುಪಿ ಜಿಲ್ಲೆಗಳಲ್ಲಿ ನವರಾತ್ರಿ ಉತ್ಸವದ ಪ್ರಮುಖ ಆಕರ್ಷಣೆಗಳಲ್ಲಿ ಒಂದಾಗಿದೆ.

ದುರ್ಗಾ ದೇವಿಯ ವಾಹನವಾದ ಹುಲಿಯನ್ನು ಗೌರವಿಸಲು ಮತ್ತು ದೇವಿಗೆ ಹರಕೆಯ ರೂಪದಲ್ಲಿ ಈ ನೃತ್ಯವನ್ನು ಸಮರ್ಪಿಸಲಾಗುತ್ತದೆ.

ಸಂಗ್ರಹಣೆ- ಸುಮಾ ಜೋಯಿಸ್

# ಕವನ ಮತ್ತು ಕ್ಯಾನ್ವಾಸ್

## ನೆಲ - ಜಲ

ಜುಳು ಜುಳು ಹರಿಯುವ ಮಳೆಯ ನೀರೆ
ಜುಂ ಜುಂ ಎನ್ನುವ ದುಂಬಿಯ ಝೇಂಕಾರವೇ
ಆಕಾಶಕ್ಕೆ ಚಪ್ಪರದಂತಿರುವ ಅಡಿಕೆ ಮರಗಳೇ
ಪಾತಾಳಕ್ಕೆ ಧುಮುಕುವ ಹರಿಯೋ ನದಿಗಳೇ
ಪ್ರಪಂಚಕ್ಕೆ ಮಾದರಿಯಾದ ಈ ಕರುನಾಡೇ
ಸಕಲ ಸೊಬಗನ್ನು ಹೊಂದಿರೋ ತುಳುನಾಡೇ
ಭತ್ತದ ಪೈರನ್ನು ಹೊಂದಿರೋ ಭೂತಾಯೇ
ನೆಮ್ಮದಿಯನ್ನು ಕರುಣಿಸೋ ಕರುಣಾಮಯೀ
ಘಾಟಿನಲ್ಲಿ ಸುರಿಯುವ ನೀರಿನ ಝರಿಗಳೇ
ಹಕ್ಕಿಯಂತೆ ತೇಲಾಡೋ ಬಿಳಿಯ ಮೋಡಗಳೇ
ಕರಾವಳಿ ತೀರದ ಸಾಗರ ಸಮುದ್ರಗಳೇ
ಮೈ ಬಿಚ್ಚಿ ಹರಿಯುವ ಹೊಳೆ ನದಿಗಳೇ
ತುಂಗ ಭದ್ರದ ಕೂಡಲ ಸಂಗಮವೇ
ಬೇಲೂರು ಹಳೇಬೀಡಿನ ಶಿಲ್ಪ ಕಲೆಗಳೇ
ಮೈಸೂರು ಸಂಸ್ಥಾನದ ಕಾವೇರಿ ನದಿಯೇ
ಸಾಗರ ಜಿಲ್ಲೆಯ ಜೋಗ ಜಲಪಾತವೇ
ಕಲುಷಿತಗೊಂಡಿರುವ ಕೆಂಗೇರಿ ಮೋರಿಯೇ
ಮಾಲಿನ್ಯದಿಂದ ಹಾಳಾಗಿರೋ ನದಿ ಹೊಳೆಗಳೇ
ಮರೆಯದಿರಿ ಮಹಾಜನರೇ
ನಮ್ಮನ್ನು ಕಾಪಾಡುತ್ತಿರುವುದು ನಮ್ಮ ನೆಲ ಜಲವೇ



ಸೌಜನ್ಯ ಎಸ್. ಎಸ್
II ಬಿ.ಎ.ಎಮ್.ಎಸ್



...ಜಿತ್.ಜಿ
III ಬಿ.ಎ.ಎಮ್.ಎಸ್

## ನೆಲ - ಜಲ

ಬಿಡದೆ ಬಿಂಕದ ಗುಟ್ಟು, ಹಸಿರು ಉಡುಗೆಯ ತೊಟ್ಟು
ನಲಿಯುತಿಹಳು ಪ್ರಕೃತಿ ಮಾತೆ..!
ಬೇಲೂರು ಹಳೆಬೀಡಿನ ಶಿಲ್ಪದಲಿ
ಶಿವಪ್ಪನಾಯಕನ ಸಾಮ್ರಾಜ್ಯದಲಿ
ಸಹ್ಯಾದ್ರಿ, ಜೋಗ ಜಲಪಾತಗಳ ನಾಡಲಿ
ತುಂಗೆ ಭದ್ರೆಯರ ಮಡಿಲಿನ ಗೂಡಲಿ
ವನ, ಸಿರಿ, ಝರಿ ತೊರೆಗಳ ನಡುವಲಿ
ನೋಡುವ ಆಸೆಯು ನೋಡುಗರ ಮನದಲಿ!
ಜುಳು ಜುಳು ಶಬ್ದದಿ ದಡೆ ದಡೆಗೆ ಧುಮುಕಿಸಲು
ತಂಪಿರಲು ತಂಗಾಳಿ ಮನದಿ ಮುದಗೊಳಿಸಲು
ಕಲ್ಮಷ ಅಳಸಿ ಕಡಲೊಂದು ಕಂಗೊಳಿಸಲು
ಜೀವಂತಿಕೆಯ ಪಾಠ, ನವಚೈತನ್ಯಗಳ ನೋಟ.
ಕಡಲಾಳದಲಿ ಬಚ್ಚಿಟ್ಟ ಮುತ್ತುಗಳೆಷ್ಟೋ?
ಹೇಳದೆ ಉಳಿದ ಮಾತುಗಳೆಷ್ಟೋ?
ತಿಳಿದು, ಕಲಿತು, ಜೀವಿಸಿಬಿಡು ಓ ಮನವೆ!!
ನಮ್ಮ ನೆಲವೆ ಒಲವು, ನಮ್ಮ ನೆಲವೆ ಬದುಕು

## ನೆಲ - ಜಲ

ನೆನಪಿನ ಗುರುತಿಗೆ ಕನ್ನಡಿ ಹಿಡಿಯಿತು ನೆಲವು.
ಗುರುತನು ಅಳಿಸಿ ಹಸಿರನು ನುಡಿಸಿತು ಜಲವು।
ಮುದುಡಿದ ಮರವೊಂದು ಮರುಳಿ ಮರಳಾಯಿತು.
ಸಂಗತಿಯ ಬೇರು ಅಲೆಗಳ ಸೇರಿ ಹರಡಿಕೊಂಡಿತು
ಮೆಟ್ಟಿ ನಿಂತ ಹೆಜ್ಜೆಯ ಉಡುಗೆ,
ಸಮಯದಿ ಹರಿದ ಹೆಮ್ಮೆಯ ಕೊಡುಗೆ.
ಕತ್ತಲ ನೆಲೆಯಲಿ ಬಿತ್ತಿದ ಕಲೆಯು
ಕಸ್ತೂರಿಯ ಗಂಧದಿ ತಲುಪಿತು ಮುಗಿಲು
ಸಾಗರ ದಾಟಿದ ಸಾಹಸ ಹಲವು
ಸೀಮೆಯ ನಿರಿಯಾಗಿ ಶೃಂಗಾರವಾಯಿತು.
ಕಪ್ಪು ಮಣ್ಣಿನ ಕಥೆಗಳ ಸೊಬಗು ಚೆಲ್ಲಿತು ಮನೆಯಂಗಳದಿ ಬೆಳಕು
ನೆಲೆಯಲಿ ಹರಿದ ಜಲದ ಆಳ।
ತಣಿಸಿತು ಕನ್ನಡಿಗರ ಮನದ ನಾದ



ಧನ್ವಿನಿ.ಕೆ.ಆರ್
III ಬಿ.ಎ.ಎಮ್.ಎಸ್



ರಕ್ಷಿತಾ ಗುಡಿಗಾರ್
II ಬಿ.ಎ.ಎಮ್.ಎಸ್






ಸಂಜನಾ. ಪಿ
I ಬಿ.ಎ.ಎಮ್.ಎಸ್






ಸಾಂಚಿತ
II ಬಿ.ಎ.ಎಮ್.ಎಸ್






ಪ್ರಜ್ಞಾ. ಪಿ
II ಬಿ.ಎ.ಎಮ್.ಎಸ್



# सत्यं परं धीमहि

## ರಾಷ್ಟ್ರೀಯ ಪೋಷಣಾ ಸಪ್ತಾಹ



ಕೌಮಾರಭೃತ್ಯ ಮತ್ತು ಸ್ವಸ್ಥವೃತ್ತ ವಿಭಾಗಗಳು, ಸೆಪ್ಟೆಂಬರ್ ೧ ರಿಂದ ೭, ೨೦೨೫ರವರೆಗೆ ಪೋಷಣಾ ಸಪ್ತಾಹವನ್ನು ಆಚರಿಸಿದವು. ಈ ಆಚರಣೆಯ ಭಾಗವಾಗಿ ಬಪ್ಪುನ್ನಿ ಕೈಮಾರ, ನುಗ್ಗಿ, ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ವೈದ್ಯಕೀಯ ಶಿಬಿರವನ್ನು ಆಯೋಜಿಸಲಾಗಿತ್ತು. ಶಿಬಿರದ ಮುಖ್ಯ ಉದ್ದೇಶವು ಶಾಲಾ ಮಕ್ಕಳಲ್ಲಿ ಸಮತೋಲಿತ ಪೋಷಣೆ, ಆರೋಗ್ಯಕರ ಆಹಾರ ಪದ್ಧತಿ ಮತ್ತು ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸುವುದಾಗಿತ್ತು.

ಆರೋಗ್ಯ ತಪಾಸಣಾ ಶಿಬಿರದಲ್ಲಿ ಪೌಷ್ಟಿಕಾಂಶ ಕೊರತೆ, ಆಹಾರ, ನೈರ್ಮಲ್ಯ ಮತ್ತು ಜೀವನಶೈಲಿಯ ಕುರಿತು ಸಮಾಲೋಚನೆ ಹಾಗೂ ತಪಾಸಣೆ ನಡೆಸಲಾಯಿತು. ಇದಲ್ಲದೆ, ಸಮತೋಲಿತ ಆಹಾರ ಮತ್ತು ರೋಗನಿರೋಧಕ ಶಕ್ತಿಯ ಬಗ್ಗೆ ಶೈಕ್ಷಣಿಕ ಅಧಿವೇಶನಗಳನ್ನು ನಡೆಸಿ, ಪೌಷ್ಟಿಕಾಂಶದ ಚಾರ್ಟ್‌ಗಳು ಮತ್ತು ಕೈಪಿಡಿಗಳನ್ನು ವಿತರಿಸಲಾಯಿತು. ಪ್ರಾಥಮಿಕ ಮತ್ತು ಪ್ರೌಢಶಾಲೆಯ ಒಟ್ಟು ೫೦ ವಿದ್ಯಾರ್ಥಿಗಳಿಗೆ ತಪಾಸಣೆ ಮತ್ತು ಸಮಾಲೋಚನೆ ನಡೆಸಲಾಯಿತು.

## ಸ್ತನ್ಯಪಾನ ಸಪ್ತಾಹ ಆಚರಣೆ





ಕೌಮಾರಭೃತ್ಯ ವಿಭಾಗ ಮತ್ತು ಪ್ರಸೂತಿ ತಂತ್ರ ಮತ್ತು ಸ್ತ್ರೀ ರೋಗ ವಿಭಾಗದ ಸಹಯೋಗದೊಂದಿಗೆ ಆಗಸ್ಟ್ ೧ ರಿಂದ ೭, ೨೦೨೫ ರವರೆಗೆ ಸ್ತನ್ಯಪಾನ ಸಪ್ತಾಹವನ್ನು ಆಚರಿಸಿತು. ತಾಯಿ ಮತ್ತು ಮಗುವಿನ ಆರೋಗ್ಯ ಹಾಗೂ ಯೋಗಕ್ಷೇಮಕ್ಕಾಗಿ ಸ್ತನ್ಯಪಾನದ ಮಹತ್ವವನ್ನು ಈ ವಾರ್ಷಿಕ ಆಚರಣೆಯು ಎತ್ತಿ ಹಿಡಿಯಿತು. ಶಿಶುಗಳು, ತಾಯಂದಿರು ಮತ್ತು ಸಮುದಾಯಕ್ಕೆ ಸ್ತನ್ಯಪಾನದ ಪ್ರಯೋಜನಗಳ ಬಗ್ಗೆ ಜಾಗೃತಿ ಮೂಡಿಸುವುದು ಇದರ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿತ್ತು.

ಕಾರ್ಯಕ್ರಮಗಳಲ್ಲಿ ಬೀದಿ ನಾಟಕ, ಮೀಮ್ ತಯಾರಿಕೆ, ಕಿರು ವಿಡಿಯೋ/ರೀಲ್ಸ್, ಪೋಸ್ಟರ್ ತಯಾರಿಕೆ, ಪ್ರಬಂಧ ಬರವಣಿಗೆ ಮತ್ತು ಚರ್ಚಾ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಜೊತೆಗೆ, ಅಂಗನವಾಡಿ ಭೇಟಿ ಮತ್ತು ಬೀದಿ ನಾಟಕಗಳ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು. ಸಪ್ತಾಹದ ಆಚರಣೆಯು ಸ್ತನ್ಯಪಾನದ ಪ್ರಯೋಜನಗಳು, ತಂತ್ರಗಳು ಮತ್ತು ಸವಾಲುಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಜ್ಞಾನವನ್ನು ಹೆಚ್ಚಿಸಿತು. ವಿಶೇಷವಾಗಿ, ಹಾಲಿನ ಬಾಟಲಿಗಳ ಬಳಕೆಯನ್ನು ತಪ್ಪಿಸಲು ಮತ್ತು ಕಡ್ಡಾಯವಾಗಿ ಮೊದಲ ಆರು ತಿಂಗಳವರೆಗೆ ಸ್ತನ್ಯಪಾನವನ್ನು ಅಳವಡಿಸಿಕೊಳ್ಳಲು ಸಮುದಾಯದ ಜಾಗೃತಿಯನ್ನು ಹೆಚ್ಚಿಸಲಾಯಿತು. ಶಿಶುಗಳ ರೋಗ ಮತ್ತು ಮರಣವನ್ನು ಕಡಿಮೆ ಮಾಡಲು ಹಾಗೂ ಆರೋಗ್ಯಕರ ಬೆಳವಣಿಗೆಗೆ ಸ್ತನ್ಯಪಾನದ ನಿರ್ಣಾಯಕ ಪಾತ್ರವನ್ನು ಇದು ಒತ್ತಿಹೇಳುತ್ತದೆ. ಆರೋಗ್ಯ ವೃತ್ತಿಪರರು, ವಿದ್ಯಾರ್ಥಿಗಳು ಮತ್ತು ಸಮುದಾಯದ ಸಾಮೂಹಿಕ ಪ್ರಯತ್ನಗಳು ಸ್ತನ್ಯಪಾನವನ್ನು ಉತ್ತೇಜಿಸುವ ಅಗತ್ಯವಿದೆ.

## ಅಂಗದಾನ ದಿನಾಚರಣೆ







ಕ್ರಿಯಾ ಶಾರೀರ ಮತ್ತು ರಚನಾ ಶಾರೀರ ವಿಭಾಗಗಳು ಸಂಯುಕ್ತವಾಗಿ ಆಗಸ್ಟ್ ೧೫ ರಿಂದ ೧೯ ರವರೆಗೆ ಅಂಗದಾನ ದಿನಾಚರಣೆಯನ್ನು ಆಯೋಜಿಸಿತ್ತು. ಈ ಕಾರ್ಯಕ್ರಮದ ಉದ್ದೇಶ ಅಂಗದಾನದ ಮಹತ್ವ, ಪರಿಣಾಮ ಮತ್ತು ಪ್ರಕ್ರಿಯೆಯ ಕುರಿತು ವಿದ್ಯಾರ್ಥಿಗಳು ಹಾಗೂ ಸಮಾಜದಲ್ಲಿ ಜಾಗೃತಿ ಮೂಡಿಸುವುದಾಗಿತ್ತು. ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ಉತ್ತೇಜಿಸಲು ಮೌನ ನಾಟಕ, ಗೋಡೆ ಚಿತ್ರಣ, ಜಾಹೀರಾತು ತಯಾರಿ ಹಾಗೂ ಶ್ರೀಮಾನದ ಮಾದರಿ ಸ್ಪರ್ಧೆಗಳನ್ನು ನಡೆಸಲಾಯಿತು. ಕಾರ್ಯಕ್ರಮದ ಮುಖ್ಯ ಆಕರ್ಷಣೆಯಾಗಿ ಶೃಂಗೇರಿಯ ವೈದ್ಯರಾದ ಡಾ. ಅಮೃತ ಯಾದವ ಅವರ ಉಪನ್ಯಾಸ ನಡೆಯಿತು. ಅವರು ಅಂಗದಾನದ ಅಗತ್ಯತೆ, ಕಾನೂನುಬದ್ಧ ಅಂಶಗಳು ಮತ್ತು ಜನರಲ್ಲಿ ಇರುವ ತಪ್ಪು ಕಲ್ಪನೆಗಳ ಕುರಿತು ವಿವರಿಸಿದರು. ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿ ಚರ್ಚೆಗಳಲ್ಲಿ ಸಕ್ರಿಯರಾಗಿದ್ದರು. ಕಾರ್ಯಕ್ರಮವು "ಜೀವ ನೀಡಿ - ಜೀವ ಉಳಿಸಿ" ಎಂಬ ಸಂದೇಶದೊಂದಿಗೆ ಯಶಸ್ವಿಯಾಗಿ ಸಂಪನ್ನವಾಯಿತು.

# सत्यं परं धीमहि

## ಅಂತರಾಷ್ಟ್ರೀಯ ಕಾಫಿ ದಿನಾಚರಣೆ

ಅಂತರಾಷ್ಟ್ರೀಯ ಕಾಫಿ ದಿನಾಚರಣೆಯನ್ನು ಉತ್ಸಾಹ ಮತ್ತು ಸಂತೋಷದ ವಾತಾವರಣದಲ್ಲಿ ಆಚರಿಸಲಾಯಿತು. ಕಾರ್ಯಕ್ರಮದ ಉದ್ದೇಶ ಕಾಫಿಯ ಆರ್ಥಿಕ, ಸಾಂಸ್ಕೃತಿಕ ಹಾಗೂ ಪರಿಸರೀಯ ಮಹತ್ವವನ್ನು ಬೆಳಗಿಸುವುದಾಗಿತ್ತು. ಕಾರ್ಯಕ್ರಮದ ಆರಂಭದಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಕಾಫಿ ಸಸಿಗಳನ್ನು ನೆಡುವ ಮೂಲಕ ಪರಿಸರ ಸಂರಕ್ಷಣೆಯ ಮತ್ತು ಶಾಶ್ವತ ಕೃಷಿಯ ಸಂದೇಶ ನೀಡಿದರು.

ಮುಖ್ಯ ಅತಿಥಿಗಳಾದ ಶ್ರೀ ಸಹದೇವ ಬಾಲಕೃಷ್ಣ (ದಕ್ಷಿಣ ಭಾರತದ ತೋಟಗಾರರ ಸಂಘದ ಯುನೈಟೆಡ್ ಪ್ಲಾಂಟರ್ಸ್ ಅಸೋಸಿಯೇಷನ್ ಸದಸ್ಯ) ಮತ್ತು ಶ್ರೀ ಆದಿತ್ಯ ರಾವ್ (ಪಾಕಶಾಸ್ತ್ರಜ್ಞ ಹಾಗೂ ರೆಸ್ಟೋರೇಟರ್) ಅವರು ಕಾಫಿಯ ಇತಿಹಾಸ, ಅದರ ಆರ್ಥಿಕ ಪ್ರಾಮುಖ್ಯತೆ ಹಾಗೂ ಭಾರತೀಯ ಸಂಸ್ಕೃತಿಯಲ್ಲಿನ ಅದರ ಸ್ಥಾನವನ್ನು ವಿವರಿಸಿದರು. ಆದಿತ್ಯ ರಾವ್ ಅವರು ಕಾಫಿ ಆಧಾರಿತ ಪಾಕವಿಧಾನಗಳ ಪ್ರದರ್ಶನ ನೀಡಿದರು.

ಕಾರ್ಯಕ್ರಮವು ಜ್ಞಾನ, ಜಾಗೃತಿ ಮತ್ತು ಶಾಶ್ವತತೆಯ ಸಂದೇಶವನ್ನು ಸಾರುತ್ತಾ ಸಾರ್ಥಕವಾಗಿ ಸಂಪನ್ನವಾಯಿತು. ಕಾಫಿಯ ಸುವಾಸನೆ ತರಹ ಈ ಆಚರಣೆ ಎಲ್ಲರ ಮನಗಳಲ್ಲಿ ನೆನಪಾಗಿ ಉಳಿಯಿತು.





## ರಾಷ್ಟ್ರೀಯ ಆಯುರ್ವೇದ ದಿನಾಚರಣೆ

ಸೆಪ್ಟೆಂಬರ್ ೨೩ - ಆಯುರ್ವೇದ ದಿನಾಚರಣೆಯು ಧನ್ವಂತರಿ ಹೋಮದೊಂದಿಗೆ ವಿಜೃಂಭಣೆಯಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಸಂಯುಕ್ತವಾಗಿ ವೈದಿಕ ಮಂತ್ರೋಚ್ಚಾರಣೆ ಮಾಡಿ ಆರೋಗ್ಯ, ಆಯುರ್ವೇದದ ಪೋಷಣೆ, ಮತ್ತು ಜನಸಾಮಾನ್ಯರ ಕಲ್ಯಾಣಕ್ಕಾಗಿ ಪ್ರಾರ್ಥಿಸಿದರು. ಹೋಮದ ಮೂಲಕ ಆಯುರ್ವೇದ ಪರಂಪರೆಯ ಮೂಲ ಮೌಲ್ಯಗಳ ಸ್ಮರಣೆ ಹಾಗೂ ಆಚರಣೆ ನಡೆಯಿತು.




ಜಾಗೃತಿ ನಡಿಗೆ - ಮಧ್ಯಾಹ್ನ ಕಾಲೇಜು ಪರಿವಾರದ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಆಯುರ್ವೇದ ಜಾಗೃತಿ ನಡಿಗೆಯನ್ನು ಆಯೋಜಿಸಿದರು. ಈ ನಡಿಗೆ ಕೊಪ್ಪ ಪಟ್ಟಣದ ಸುತ್ತಮುತ್ತ ಬೀದಿಗಳಲ್ಲಿ ಜರುಗಿದ್ದು ಜನರಿಗೆ ಆಯುರ್ವೇದದ ಮಹತ್ವ, ಆರೋಗ್ಯ ಸಂರಕ್ಷಣೆ, ದೈನಂದಿನ ಜೀವನದಲ್ಲಿನ ಆಯುರ್ವೇದದ ಅನುಭವಾತ್ಮಕ ಪ್ರಯೋಜನಗಳನ್ನು ತಿಳಿಸುವ ಉದ್ದೇಶ ಹೊಂದಿತ್ತು.

## ಸಂಹಿತಾ ಸುಧಾ

ಸಂಹಿತಾ ಸುಧಾ - ಚರಕ ಜಯಂತಿಯ ಪ್ರಯುಕ್ತ ಒಂದು ವಿಶೇಷ ಶೈಕ್ಷಣಿಕ ಕಾರ್ಯಕ್ರಮವನ್ನು ೨೦೨೫ರ ಆಗಸ್ಟ್ ೪ ಮತ್ತು ೫ರಂದು ಸಂಹಿತಾ ಸಿದ್ಧಾಂತ ಹಾಗೂ ಸಂಸ್ಕೃತ ವಿಭಾಗ ಕಾಲೇಜಿನ ಸಭಾಂಗಣದಲ್ಲಿ ಯಶಸ್ವಿಯಾಗಿ ಆಯೋಜಿಸಲಾಯಿತು. ಸಂಹಿತೆಯ ಮೂಲಾರ್ಥ ಮತ್ತು



ಅವುಗಳ ಆಧುನಿಕ ಪ್ರಯೋಗಾತ್ಮಕತೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವ ಉದ್ದೇಶವನ್ನು ಹೊಂದಿತ್ತು.

ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ಶ್ರೀವತ್ಸ ಹಾಗೂ ಡಾ. ಅರ್ಹಂತ್ ಕುಮಾರ್ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

# सत्यं परं धीमहि

## ಸೋರಿಯಾಸಿಸ್ ತಿಂಗಳ ಆಚರಣೆ

ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸುವುದು ಹಾಗೂ ತ್ವರಿತ ಹಸ್ತಕ್ಷೇಪದ ಅಗತ್ಯವನ್ನು ಮನಗಂಡು, ಎಎಲ್‌ಎನ್ ರಾವ್ ಮೆಮೋರಿಯಲ್ ಆಯುರ್ವೇದ ವೈದ್ಯಕೀಯ ಕಾಲೇಜು 2025ರ ಆಗಸ್ಟ್ ತಿಂಗಳನ್ನು "ಸೋರಿಯಾಸಿಸ್ ತಿಂಗಳ"ನ್ನಾಗಿ ಆಚರಿಸುವ ಕಾರ್ಯಕ್ರಮವನ್ನು ಪ್ರಾರಂಭಿಸಿತು. ಈ ಉಪಕ್ರಮವು ಆಯುರ್ವೇದದ ತತ್ವಗಳನ್ನು ಸಮುದಾಯ ತಲುಪುವಿಕೆ, ಶಿಕ್ಷಣ ಹಾಗೂ ವೈದ್ಯಕೀಯ ಮೌಲ್ಯಮಾಪನಗಳೊಂದಿಗೆ ಸಂಯೋಜಿಸುವ ಉದ್ದೇಶ ಹೊಂದಿದೆ. ಈ ಹಿನ್ನೆಲೆಯಲ್ಲಿ ಅಗದತಂತ್ರ ಹಾಗೂ ಸ್ವಸ್ಥವೃತ್ತ ವಿಭಾಗದ ವತಿಯಿಂದ ೦೬.೦೮.೨೫ ರಂದು ನುಗ್ಗಿ ಗ್ರಾಮದ ತೋಟಕಾರ್ಮಿಕರ ನಡುವೆ ಸಮೀಕ್ಷೆ ನಡೆಸಿದರು. ಅದಲ್ಲದೇ ಕಾಯ ಚಿಕಿತ್ಸೆ ಮತ್ತು ರಸಶಾಸ್ತ್ರ-ಭೈಷಜ್ಯ ಕಲ್ಪನಾ ವಿಭಾಗದವರು ಚಿಕಿತ್ಸೆ ಹಾಗೂ ಔಷಧಿ ವಿತರಣೆ ಮಾಡಿದರು.

ಸೋರಿಯಾಸಿಸ್ ತಿಂಗಳ ಆಚರಣೆಯ ಮುಖ್ಯ ಉದ್ದೇಶಗಳು:
ಜಾಗೃತಿ ಮೂಡಿಸುವುದು: ಸೋರಿಯಾಸಿಸ್ ಹಾಗೂ ಇತರೆ ಸಾಮಾನ್ಯ ಚರ್ಮರೋಗಗಳ ಕುರಿತು ಜನಸಾಮಾನ್ಯರಿಗೆ ಶಿಕ್ಷಣ, ಶೀಘ್ರಪತ್ತೆ ಹಾಗೂ ಆಯುರ್ವೇದ ಚಿಕಿತ್ಸೆ ಶಾಸ್ತ್ರೀಯ ವಿಧಾನಗಳ ಆಧಾರದ ಮೇಲೆ ಸೂಕ್ತ ಆಯುರ್ವೇದ ನಿರ್ವಹಣೆ ಮತ್ತು ಚಿಕಿತ್ಸೆ ಒದಗಿಸುವುದು.

ಫಲಿತಾಂಶ ಮೌಲ್ಯಮಾಪನ: ತಪಾಸಣೆ, ಫಾಲೋ ಅಪ್ ವಿದ್ಯಾರ್ಥಿ ಪಾಲ್ಗೊಳ್ಳುವಿಕೆ : ಸಮುದಾಯ ಆರೋಗ್ಯ ಮತ್ತು ಚರ್ಮರೋಗ ತಪಾಸಣೆಯಲ್ಲಿ ವಿದ್ಯಾರ್ಥಿಗಳಿಗೆ ಅನುಭವ ಕಲ್ಪಿಸುವುದು.





## ಸಂಸ್ಕೃತ ದಿನಾಚರಣೆ

"2025ರ ಆಗಸ್ಟ್ 9ರಂದು ಅಂತರರಾಷ್ಟ್ರೀಯ ಸಂಸ್ಕೃತ ದಿನಾಚರಣೆ ಸಂಸ್ಕೃತ ಕ್ಲಬ್‌ನ ಆಶ್ರಯದಲ್ಲಿ ಹಾಗೂ ಎಎಲ್‌ಎನ್ ರಾವ್ ಮೆಮೋರಿಯಲ್ ಆಯುರ್ವೇದಿಕ್ ಮೆಡಿಕಲ್ ಕಾಲೇಜು, ಕೊಪ್ಪ ಅವರ ಸಂಹಿತಾ-ಸಿದ್ಧಾಂತ ಹಾಗೂ ಸಂಸ್ಕೃತ ವಿಭಾಗಗಳ ಸಹಯೋಗದಲ್ಲಿ ಕಾಲೇಜಿನ ಆಡಿಟೋರಿಯಂನಲ್ಲಿ ಭವ್ಯವಾಗಿ ಆಚರಿಸಲಾಯಿತು.
ಉತ್ಸವದ ಅಂಗವಾಗಿ, ಆಗಸ್ಟ್ 8, 2025ರಂದು ಕಾಲೇಜಿನ ಎ.ವಿ ರೂಮಿನಲ್ಲಿ ಎಲ್ಲಾ ವಿದ್ಯಾರ್ಥಿಗಳಿಗಾಗಿ ಸಂಸ್ಕೃತ ಅನುವಾದ ಸ್ಪರ್ಧೆಯನ್ನು ನಡೆಸಲಾಯಿತು."
"ಸಂಸ್ಕೃತ ಅನುವಾದ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಮುಖ್ಯ ಅತಿಥಿ ಶ್ರೀ ಕರಂಬಳ್ಳಿ ಕೃಷ್ಣ ಶೆಟ್ಟಿರವರು ಬಹುಮಾನಗಳನ್ನು ವಿತರಿಸಿದರು."






## ಸ್ವತಂತ್ರ ದಿನಾಚರಣೆ

ಆಗಸ್ಟ್ 15, 2025ರಂದು ಎಎಲ್‌ಎನ್‌ರಾವ್ ಸ್ಮಾರಕ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಕೊಪ್ಪ, ಕ್ಯಾಂಪಸ್‌ನಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆ ಭವ್ಯವಾಗಿ ಜರುಗಿತು. ಕಾರ್ಯಕ್ರಮವನ್ನು ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಹರ್ಷ ಎನ್.ಎಂ ಅವರು ರಾಷ್ಟ್ರೀಯ ಧ್ವಜಾರೋಹಣ ಮಾಡಿ, ಮಹಾತ್ಮರ ತ್ಯಾಗ, ದೇಶಭಕ್ತಿ ಹಾಗೂ ಪ್ರೇರಣಾದಾಯಕ ಅಭಿಪ್ರಾಯವನ್ನು ಹಂಚಿಕೊಂಡರು. ಬಳಿಕ ರಾಷ್ಟ್ರ ನಿರ್ಮಾಣದಲ್ಲಿ ಯುವಕರ ಜವಾಬ್ದಾರಿಯ ಕುರಿತು ನಮ್ಮ ವಿದ್ಯಾರ್ಥಿಗಳು ದೇಶಭಕ್ತಿ ಗೀತೆ, ನೃತ್ಯ, ಭಾಷಣ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರದರ್ಶಿಸಿ ದೇಶಪ್ರೇಮದ ಸಂದೇಶವನ್ನು ಸಾರಿದರು. ಕಾರ್ಯಕ್ರಮದಲ್ಲಿ ಅಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳು ಸಕ್ರಿಯವಾಗಿ ಭಾಗವಹಿಸಿದರು.



**ಸಿರಿಗನ್ನಡಂ ಗೆಲ್ಗೆ**
**ಸಿರಿಗನ್ನಡಂ ಬಾಳ್ಗೆ**
















## ವಿದ್ಯಾರ್ಥಿ ಸಂಘ ಸಂಪಾದಕರ ತಂಡ

ಡಾ. ಹರ್ಷ ಎನ್.ಎಂ - ಪ್ರಾಂಶುಪಾಲರು

ಡಾ. ಸುಕೃತ್.ಜಿ (ಸಹ ಪ್ರಾಧ್ಯಾಪಕರು)

ಡಾ. ಮಾಧುರಿ.ಜಿ ಹೆಗಡೆ (ಸಹ ಪ್ರಾಧ್ಯಾಪಕರು)

ಡಾ. ಸುಪ್ರೀತಾ.ಎಸ್ ಶೆಟ್ಟಿ (ಸಹ ಪ್ರಾಧ್ಯಾಪಕರು)

ಅಮೋಘ ಎಸ್.ಆರ್ (3ನೇ ಬಿ.ಎ.ಎಂ.ಎಸ್)

ಸುಮಾ ಎನ್.ಆರ್ (3ನೇ ಬಿ.ಎ.ಎಂ.ಎಸ್)

ಧನುಷಾ ಕೆ.ಎನ್ (3ನೇ ಬಿ.ಎ.ಎಂ.ಎಸ್)